# ಹೆಣ್ಣುಲೋಕದ ಪಲುಕು!



ಎಲ್‌ಜಿಬಿಟಿಕ್ಯೂ ಸಮುದಾಯದ ಸಂವೇದನೆಯನ್ನು ಮತ್ತು ಹೆಣ್ತನದ ತಲ್ಲಣಗಳನ್ನು ಹೆಣೆದು ಕಟ್ಟಿದ ಲೋಕವಿದು. ಜ್ವಲಂತ ಸಮಸ್ಯೆಯನ್ನು ಇಟ್ಟುಕೊಂಡಿದ್ದರೂ ಕಲೆಯಾಗಿಯೂ ಗಮನಸೆಳೆಯುವುದು ಈ ಕಿರುಚಿತ್ರದ ಯಶಸ್ಸು.

■ ಗೌರಿ

ಎಲ್‌ಜಿಬಿಟಿಕ್ಯೂ ಸಮುದಾಯದ ಸಮಸ್ಯೆ ಮತ್ತು ಸವಾಲುಗಳು ಇತ್ತೀಚೆಗಷ್ಟೇ ಸಮಾಜದ ಮುಖ್ಯವಾಹಿನಿಯಲ್ಲಿ ತೆರೆದುಕೊಳ್ಳುತ್ತಿದೆ. ಇದುವರೆಗೂ ಅದು ಗುಟ್ಟಾಗಿ ಇಟ್ಟುಕೊಳ್ಳಬೇಕಾದ ವಿಷಯವಾಗಿಯೋ, ಎಲ್ಲರೂ ತಿರಸ್ಕಾರದಿಂದ ನೋಡುವ ಸಂಗತಿಯಾಗಿಯೋ ಇತ್ತು. ಆದರೆ ಅವರ ಧ್ವನಿ ಈಗೀಗ ಸಮಾಜದ ಉಳಿದ ವಲಯಗಳಿಗೂ ಕೇಳಿಸಲಾರಂಭಿಸಿದೆ. ಹೀಗಾಗಿಯೇ ಬೇರೆ ಬೇರೆ ಕಲೆಯ ಮಾಧ್ಯಮಗಳಲ್ಲಿಯೂ ಎಲ್‌ಜಿಬಿಟಿಕ್ಯೂ ಸಮುದಾಯದ ಸಂವೇದನೆಗಳು ಅಭಿವ್ಯಕ್ತಿಗೊಳ್ಳಲು ಪ್ರಾರಂಭವಾಗಿದೆ.

ಹೀಗೆ ಸಮುದಾಯವೊಂದು ಕಲಾಮಾಧ್ಯಮಕ್ಕೆ ತೆರೆದುಕೊಂಡಾಗ, ಆ ಜಗತ್ತನ್ನು ಹಿಡಿಯುವಾಗ ಅದು ಕಲೆಯಾಗುವ ಬದಲು ಡಾಕ್ಯುಮೆಂಟರಿಯೋ, ಆ ಮಾಧ್ಯಮದ ಪರವಾದ ವಾದಸರಣಿಯೋ ಆಗುವ ಅಪಾಯ ಇದ್ದೇ ಇರುತ್ತದೆ. ಆದರೆ ಈ ಅಪಾಯಗಳನ್ನು ಮೀರಿಕೊಂಡು ಎಲ್‌ಜಿಬಿಟಿಕ್ಯೂ ಸಮುದಾಯದ ಸಂವೇದನೆಯನ್ನು ತುಂಬ ಸೂಕ್ಷ್ಮವಾಗಿಯೂ, ಸಹಜವಾಗಿಯೂ ತೋರಿಸುವ ‘ಪೆರೆನಿಯಲ್’ ಕಿರುಚಿತ್ರ ಕಲೆಯಾಗಿಯೂ ಗೆಲ್ಲುತ್ತದೆ.

ಎಲ್‌ಜಿಬಿಟಿಕ್ಯೂ ಸಮುದಾಯಕ್ಕೆ ಸೇರಿದ ಮುಖ್ಯಪಾತ್ರದ ಜೊತೆಗೆ ಮೊದಲ ಬಾರಿ ಋತುಮತಿಯಾಗಿರುವ ಹರೆಯದ ಹುಡುಗಿಯೊಬ್ಬಳೂ ಇಲ್ಲಿದ್ದಾಳೆ. ಬಯಸಿ ಹೆಣ್ಣಾದವಳೊಬ್ಬಳು, ಹುಟ್ಟಿನಿಂದ ಹೆಣ್ಣಾದವಳು ಇನ್ನೊಬ್ಬಳು...

ಹೆಸರು: ಪೆರೆನಿಯಲ್ (ಇಂಗ್ಲಿಷ್)
ನಿರ್ದೇಶನ: ನವೋಮಿ ಕ್ಯುಬೆರೊ
ನಿರ್ಮಾಣ: ಕೆಲ್ಲಿ ಡ್ರೇಕ್
ಛಾಯಾಗ್ರಹಣ: ಒಲಿವಿಯಾ ಮಾಲೆಸ್ಕೋ
ಸಂಕಲನ: ಎಮಿಲಿ ಸೊಮಿನ್ ಪಾರ್ಕ್
ಧ್ವನಿ ವಿನ್ಯಾಸ: ಇಟೊ ಚೋಹಿ
ತಾರಾಗಣ: ಥಾಮಸ್ ಮೆಕ್‌ನಮರಾ, ನಟೈಲ್ ಪೊಲಿಸನ್, ಜೂನಿಯರ್ ಒರ್ಲ್ಲಾನಾ

ಬಯಸಿ ಹೆಣ್ಣಾದವಳಿಗೊಬ್ಬ ಗೆಳೆಯ ಇದ್ದಾನೆ. ಅವನು ರೂಮಿನಲ್ಲಿ ಅವಳ ಜೊತೆ ದೇಹ ಹಂಚಿಕೊಳ್ಳಲಿಕ್ಕೆ ಸಿಗುತ್ತಾನೆ. ಆದರೆ ಅವಳ ಜೊತೆ ಧೈರ್ಯದಿಂದ ಹೊರಜಗತ್ತಿಗೆ ಮುಖಾಮುಖಿ ಆಗಲಾರ. ರಾತ್ರಿ ಮಲಗಿ, ಅವಳು ಬೆಳಿಗ್ಗೆ ಕಣ್ಬಿಡುವಷ್ಟರಲ್ಲಿ ಮರೆಯಾಗಿಬಿಡುತ್ತಾನೆ. ಅಂಗಡಿಯಲ್ಲಿ ಮುಖಾಮುಖಿಯಾದರೂ ಮತ್ಯಾರಾದರೂ ನೋಡಿಯಾರು ಎಂಬ ಆತಂಕದಿಂದ ಅಪರಿಚಿತನ ಹಾಗೆ ತಪ್ಪಿಸಿಕೊಂಡು ಹೋಗಿಬಿಡುತ್ತಾನೆ. ಅವನಿಗೆ ಅವಳ ಜೊತೆಗಿನ ದೇಹಸುಖ ಬೇಕು. ಆದರೆ ಆ ಸುಖದ ಜವಾಬ್ದಾರಿ ಬೇಡ.

ಅವಳ ಮನೆಗೆ ಅವಳದೇ ವಿದ್ಯಾರ್ಥಿನಿಯೊಬ್ಬಳು ಬಂದು ಸೇರಿಕೊಳ್ಳುತ್ತಾಳೆ. ಅವಳ ತರಗತಿ ಇರುವುದು ಮರುದಿನ. ಆದರೆ ದಾರಿಯಲ್ಲಿ ಹೋಗುವಾಗ ‘ನಾನು ನಿಮ್ಮ ಮನೆ ಬಾತ್‌ರೂಮ್ ಬಳಸಿಕೊಳ್ಳಬಹುದೇ?’ ಎಂದು ಕೇಳಿಕೊಂಡು ಬರುವ ಆ ಹುಡುಗಿ ಮೊದಲ ಬಾರಿಗೆ ಋತುಮತಿಯಾಗಿದ್ದಾಳೆ. ಅದನ್ನು ಹೇಗೆ ನಿರ್ವಹಿಸುವುದು ಎಂಬುದು ಅವಳಿಗೆ ಗೊತ್ತಿಲ್ಲ. ಅದಕ್ಕಾಗಿ ಆ ಹುಡುಗಿ ಇವಳ ಸಹಾಯ ಕೇಳುತ್ತಾಳೆ. ಆದರೆ ಇವಳೋ ತನ್ನ ಬಯಸಿ ಹೆಣ್ಣಾಗಿ ಬದುಕುತ್ತಿರುವವಳು. ಆದರೆ ಹೆಣ್ಣಿಗಾಗುವ ಮುಟ್ಟಿನ ಅನುಭವ ಅವಳಿಗೆ ಇಲ್ಲ.

ಹೀಗೆ ಬಯಸಿ ಹೆಣ್ಣಾದವಳು ಮತ್ತು ಹುಟ್ಟಿನಿಂದ ಹೆಣ್ಣಾದವಳ ನಡುವೆ ಗೊತ್ತಿಲ್ಲದೆಯೇ ಒಂದು ಬಂಧ ಬೆಳೆಯುತ್ತದೆ. ಆ ಬಂಧ ಇಬ್ಬರನ್ನೂ ಪೋಷಿಸುತ್ತದೆ. ಇಬ್ಬರಿಗಷ್ಟೇ ಅರ್ಥವಾಗುವ ತಂತುವೊಂದು ಅವರನ್ನು ಬೆಸೆಯುತ್ತದೆ. ಅದರ ಬಲದಿಂದಲೇ, ಸುಖವನ್ನಷ್ಟೇ ಬಯಸುತ್ತ, ಅದರ ಜವಾಬ್ದಾರಿ ಹೊರಲು ಒಪ್ಪದ ಗೆಳೆಯನಿಗೆ ‘ಮತ್ತೆಂದೂ ಬರಬೇಡ’ ಎಂದು ಹೇಳಲು ಸಾಧ್ಯವಾಗುತ್ತದೆ.

ಅತ್ಯಂತ ಕಡಿಮೆ ಮಾತು, ಮೌನದಿಂದಲೇ ಹಲವು ಅರ್ಥಗಳನ್ನು ಹೊಮ್ಮಿಸಬಲ್ಲ ದೃಶ್ಯ ಸಂಯೋಜನೆ, ಯಾವ ಮಾತಿಗೂ ನಿಲುಕದ ಮಾತುಗಳನ್ನು ಕಣ್ಣಲ್ಲೇ ಹೊಮ್ಮಿಸಬಲ್ಲ ನಟರು ಎಲ್ಲವೂ ಸೇರಿ ಈ ಕಿರುಚಿತ್ರವನ್ನು ಬಹುಕಾಲ ನಮ್ಮ ಮನಸಲ್ಲಿ ಕಾಡುವ ಹಾಗೆ ಮಾಡುತ್ತದೆ.

ಕಿರುಚಿತ್ರ ವೀಕ್ಷಣೆಗೆ https://bit.ly/3d4wisR ಕೊಂಡಿ/ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.